ಓ ಎಸ್ ನಂ. 5/2015
ಪಿ ಡಬ್ಲ್ಯು 1
ದಿನಾಂಕ 18-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಬಿ ಆರ್ ವಕೀಲರಿಂದಃ

ಶಿವಕುಮಾರ್, ಗೋವಿಂದಪ್ಪ, ವೆಂಕಟೇಶ, ನರಸಿಂಹಮೂರ್ತಿ, ಓಂಕಾರಪ್ಪ, ಸಗನಿರಂಗಪ್ಪ ಇವರುಗಳು ಸತ್ತಪ್ಪರವರ ಮೂರನೇ ತಲೆಮಾರಿನ ವ್ಯಕ್ತಿಗಳು ಎಂದರೆ ಸರಿ. ಸರ್ವೆ ನಂ.4/26 ರ ಜಮೀನು ತಿಮ್ಮಮ್ಮರವರ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿ ತಿಮ್ಮಮ್ಮರವರ ಹೆಸರಿಗೆ ಖಾತೆ ಬರುವ ಮೊದಲು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಕರಿಯಪ್ಪರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಸದರಿ ಕರಿಯಪ್ಪರವರು ಹುಲ್ಲೇಹಳ್ಳಿಯವರು. ಸದರಿ ಸರ್ವೆ ನಂ.4/26 ರ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ 2 ಚಿಲ್ಲರೆ ಎಕರೆ ಎಂದು ನುಡಿಯುತ್ತಾರೆ. ನಿಖರವಾಗಿ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಕರಿಯಪ್ಪರವರಿಂದ ತಿಮ್ಮಮ್ಮ ಯಾವಾಗ ಕೊಂಡುಕೊಂಡಿರುತ್ತಾರೆ ಎಂದರೆ ಸಾಕ್ಷಿ ನೆನಪಿಲ್ಲ, ಆದರೆ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಎಷ್ಟು ಮೌಲ್ಯಕ್ಕೆ ಖರೀದಿಸಲಾಗಿದೆ ಎಂದರೆ ಸಾಕ್ಷಿ 2 ಚಿಲ್ಲರೆ ಲಕ್ಷಕ್ಕೆ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಕರಿಯಪ್ಪರವರಿಂದ ತಿಮ್ಮಮ್ಮರವರು ಖರೀದಿಸಿದ ಆಸ್ತಿಯ ಕ್ರಯಪತ್ರಕ್ಕೆ ಅವರ ಕುಟುಂಬದವರನ್ನು ಹೊರತು ಪಡಿಸಿ ನೀವು ಯಾರಾದರೂ ಸಾಕ್ಷಿಯಾಗಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸದರಿ ಸರ್ವೆ ನಂ.4/26 ರ ಆಸ್ತಿಯ ಸ್ವಾಧೀನದಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿ ತಿಮ್ಮಮ್ಮರವರೇ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿ

ಮುಂದುವರೆದು ಒಟ್ಟು ಕುಟುಂಬದಲ್ಲಿ ಎಲ್ಲಾರೂ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ಸರ್ವೆ ನಂ.4/26ರ ಜಮೀನು ಖಾಲಿ ಭೂಮಿಯಾಗಿರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಯಲ್ಲಿ ಸದರಿ ಸರ್ವೆ ನಂಬರಿನಲ್ಲಿ ಯಾವ ವಿಧದ ಜಮೀನು ಇದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಖಾಲಿ ಜಮೀನು ಎಂದು ನುಡಿಯುತ್ತಾರೆ. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸರ್ವೆ ನಂ.4/26ರ ಆರ್ ಟಿ ಸಿ ಯಲ್ಲಿ ಬೆಳೆ ಕಲಂನಲ್ಲಿ ಏನೆಂದು ಬರೆದಿದೆ ಎಂದು ಸಾಕ್ಷಿಗೆ ನಿಪಿ-114ರ ಪಹಣಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಅದರ ಬೆಳೆ ಕಲಂನಲ್ಲಿ ಅಡಿಕೆ ಎಂದು ನಮೂದಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮೊದಲು ಖರೀದಿಸಿದಾಗ ಖಾಲಿ ಜಮೀನು ಇತ್ತು ಎಂದು ನುಡಿದಿರುತ್ತಾರೆ. ಯಾವ ವರ್ಷದಲ್ಲಿ ಸದರಿ ಜಮೀನನ್ನು ಖರೀದಿಸಲಾಗಿದೆ ಎಂದರೆ ಸಾಕ್ಷಿ ಸುಮಾರು 8 ವರ್ಷ ಆಗಿದೆ ಎಂದು ನುಡಿಯುತ್ತಾರೆ. ಸರ್ವೆ ನಂ.4/26ರ ಆಸ್ತಿಯನ್ನು ತಿಮ್ಮಮ್ಮರವರು ಕಾರ್ಪೋರೇಷನ್ ಬ್ಯಾಂಕ್ ಬೀರೂರಿನಲ್ಲಿ ಆಧಾರ ಮಾಡಿ ಸಾಲ ಪಡೆದಿದ್ದು, ಆ ಸಮಯದಲ್ಲಿ ತಿಮ್ಮಮ್ಮ ಮತ್ತು ಅವರ ಮಕ್ಕಳನ್ನು ಹೊರತುಪಡಿಸಿ ನಾವೇನಾದರೂ ಸದರಿ ಆಧಾರ ಪತ್ರಗಳಿಗೆ ಸಹಿ ಮಾಡಿರುತ್ತೇವಾ ಎಂದರೆ ಸಾಕ್ಷಿ ಅವರೇನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಮೇಲೆ ಕಾರ್ಪೋರೇಷನ್ ಬ್ಯಾಂಕಿನಲ್ಲಿ ಎಷ್ಟು ಸಾಲ ಬಾಕಿ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.4/26ರ ಆಸ್ತಿಯ ಖಾತೆ ತಿಮ್ಮಮ್ಮರವರ ಹೆಸರಿಗೆ ಯಾವಾಗ ಬಂತು ಎಂದರೆ ಸಾಕ್ಷಿ ನಿಖರವಾಗಿ ವರ್ಷ ಗೊತ್ತಿಲ್ಲ, ಆದರೆ ಅವರು ಸದರಿ ಜಮೀನನ್ನು ಖರೀದಿಸಿದಾಗಲೆ ಆಗಿದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಂತಹ ಯಾವುದೇ ಕ್ರಯಪತ್ರವನ್ನು ಹಾಜರುಪಡಿಸಿಲ್ಲ ಮತ್ತು ಅಂತಹ

ಕ್ರಯಪತ್ರವನ್ನು ನಾನು ನೋಡಿಲ್ಲದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-116 ರಂತೆ ಸರ್ವೆ ನಂ.4/14 ರ ಜಮೀನಿನ ಖಾತೆ ಈ ಹಿಂದೆ ಗೋವಿಂದಪ್ಪರವರ ಹೆಸರಿನಲ್ಲಿದ್ದು, ಪೌತಿ ಆಧಾರದಲ್ಲಿ ತಿಮ್ಮಮ್ಮರವರ ಹೆಸರಿಗೆ ಬಂದಿರುತ್ತದೆ. ಅದರ ವಿಸ್ತೀರ್ಣ 2 ಎಕರೆ 10 ಗುಂಟೆ ಆಗಿರುತ್ತದೆ. ಅದು ಖಾಲಿ ಜಮೀನಾಗಿರುತ್ತದೆ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿದ್ದಾಗ ದರ್ಕಾಸ್ತಿನಲ್ಲಿ ಬಂದ ಜಮೀನು ಎಂದು ನುಡಿಯುತ್ತಾರೆ. ಸದರಿ ಆರ್ ಟಿ ಸಿ ಬೆಳೆ ಕಲಂನಲ್ಲಿ ತೆಂಗಿನ ತೋಟ ಇದೆ ಎಂದು ನಮೂದು ಇದೆ ಎಂದರೆ ಸಾಕ್ಷಿ ಈಗ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸುಮಾರು 5-6 ವರ್ಷಗಳಿಂದ ತೆಂಗಿನ ತೋಟವನ್ನು ಮಾಡಿರುತ್ತಾರೆ. ಸದರಿ ಜಮೀನು ಗೋವಿಂದಪ್ಪನವರಿಗೆ ಹೇಗೆ ಬಂತು ಎಂದರೆ ಸಾಕ್ಷಿ ಒಟ್ಟು ಕುಟುಂಬದ ಪರವಾಗಿ ದರ್ಕಾಸ್ತಿನಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.